**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಿದ ದಿನಾಂಕ : 05.12.2025**

**ಪಾಟೀ ಸವಾಲುಃ 1 ನೇ ಎದುರುದಾರರ ಪರ ವಕೀಲರಿಂದಃ**

1. ನಾನು ದ್ವಿತೀಯ ವರ್ಷದ ಬಿ.ಎ ವರೆಗೆ ಓದಿದ್ದೇನೆ. ನಾನು ವ್ಯವಸಾಯ ಮಾಡುತ್ತಿದ್ದೇನೆ. 2018 ರಲ್ಲಿ ಕಾಲೇಜು ಬಿಟ್ಟೆನು. ನಿಮ್ಮ ಶಾಲಾ ದಾಖಲಾತಿಗಳಲ್ಲಿ ತಾಯಿಯ ಹೆಸರನ್ನು ಏನೆಂದು ಕೊಟ್ಟಿದ್ದೀರ ಎಂದರೆ, ಸಾಕ್ಷಿ ರೇಣುಕಾ ಎಂದು ಕೊಟ್ಟಿದೆ ಎಂದು ಹೇಳಿರುತ್ತಾರೆ. ಕೆಂಪಮ್ಮ ರವರ ಜೊತೆ ನೀವು ವಾಸವಿದ್ದ ಬಗ್ಗೆ ಏನು ದಾಖಲೆ ಕೊಟ್ಟಿದ್ದೀರ ಎಂದರೆ ಸಾಕ್ಷಿ ಮತದಾರರ ಪಟ್ಟಿ ಮತ್ತು ಆಧಾರ್ ಕಾರ್ಡ್ ಕೊಟ್ಟಿದೆ ಎಂದು ಹೇಳುತ್ತಾರೆ. ನಿಪಿ.3 ನ್ನು ಈ ಪ್ರಕರಣಕ್ಕಾಗಿ ನೀವೆ ಸೃಷ್ಟಿಸಿಕೊಂಡಿದ್ದೀರ ಎಂದರೆ ಸರಿಯಲ್ಲ. 6 ನೇ ಅರ್ಜಿದಾರರಿಗೆ ಒಟ್ಟು ಇಬ್ಬರು ಮಕ್ಕಳು. ನಾನು ಮತ್ತು ನನ್ನ ಅಕ್ಕ ಎಂದು ಹೇಳಿರುತ್ತಾರೆ. ನಿಮ್ಮ ತಂದೆ ಪ್ರಕಾಶ ಹಾಗೂ ತಾಯಿ ರೇಣುಕಾರವರಿಗೆ ನೀವೊಬ್ಬರೇ ಗಂಡು ಮಗ ಆಗಿದ್ದರಿಂದ ನಿಮ್ಮನ್ನು ಕೆಂಪಮ್ಮನವರಿಗೆ ದತ್ತು ಕೊಡುವ ಪ್ರಮೇಯ ಇರಲಿಲ್ಲ ಎಂದರೆ ಸರಿಯಲ್ಲ. ಕೆಂಪಮ್ಮರವರು ತೀರಿ ಹೋದಾಗ ಅವರಿಗೆ ವಯಸ್ಸು ಸುಮಾರು 75 ವರ್ಷ ಆಗಿತ್ತು. ಕೆಂಪಮ್ಮ ರವರ ತಂದೆ ತಾಯಿಯ ಹೆಸರು ನನಗೆ ಗೊತ್ತಿಲ್ಲ. ಕೆಂಪಮ್ಮರವರು ವಕೀಲರಿಗೆ ಮಾಹಿತಿ ಕೊಡುವಾಗ ನಾನು ಅವರ ಜೊತೆ ಹೋಗಿರಲಿಲ್ಲ. ಮರಣ ಶಾಸನದ ವಿಚಾರ ಕೆಂಪಮ್ಮನವರು ಮರಣ ಹೊಂದಿದ ನಂತರ ಗೊತ್ತಾಗಿರುತ್ತದೆ. ಕೆಂಪಮ್ಮನವರ ಪೆಟ್ಟಿಗೆಯಲ್ಲಿ ಮರಣ ಶಾಸನ ಸಿಕ್ಕಿತು. ವಾರಸುದಾರರ ಅರ್ಜಿಯಲ್ಲಿ ಈ ಸಂಗತಿ

*ಬರೆಸಿರುತ್ತೇನೆ. ಮರಣ ಶಾಸನ ಪತ್ರಕ್ಕೆ ಅಣ್ಣೇಗೌಡರು, ಮೊಗಣ್ಣಶೆಟ್ಟಿ ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆ. ವಿಲ್ ನ್ನು ಯಾರು ಬರೆದಿದ್ದಾರೆಂದು ನನಗೆ ಗೊತ್ತಿಲ್ಲ. ಕೆಂಪಮ್ಮನವರು ಬದುಕಿದ್ದಾಗ ದಾಖಲೆಗಳಿಗೆ ಅವರ ಹೆಬ್ಬೆಟ್ಟು ಹಾಕುತ್ತಿದ್ದರು. ಬಚ್ಚೇಗೌಡರು 1995 ರಲ್ಲಿ ತೀರಿ ಹೋದರು. ಕೆಂಪಮ್ಮ ರವರನ್ನು ಬಚ್ಚೇಗೌಡರ ಅಣ್ಣ ತಮ್ಮಂದಿರು ನೋಡಿಕೊಳ್ಳುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ನಾನು ಮತ್ತು ನನ್ನ ತಾಯಿ ಪ್ರತ್ಯೇಕವಾಗಿ ಒಂದು ಮನೆಯಲ್ಲಿ ವಾಸವಿದ್ದೆವು ಎಂದು ಹೇಳುತ್ತಾರೆ. ನನಗೆ ಸುಮಾರು 10 ರಿಂದ 12 ವರ್ಷ ಇದ್ದಾಗ ಕೆಂಪಮ್ಮರವರ ಜೊತೆ ವಾಸ ಮಾಡಲು ಪ್ರಾರಂಭಿಸಿದೆನು. ದತ್ತು ಸ್ವಿಕಾರದ ಬಗ್ಗೆ ಕಾರ್ಯ ಕ್ರಮ ಏನಾದರು ನಡೆಯಿತ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. 2015 ರಲ್ಲಿ ದತ್ತು ಸ್ವೀಕಾರ ಮಾಡಿದರು ಆಗ ನನಗೆ 13 ರಿಂದ 14 ವರ್ಷ ಆಗಿತ್ತು. ಕೆಂಪಮ್ಮ ನವರ ತಾಯಿಯ ಹೆಸರು ಗಿರಿಯಮ್ಮ ಮತ್ತು ತಂದೆಯ ಹೆಸರು ಜವರೇಗೌಡ ಎಂದು ನಿಪಿ.5 ರಲ್ಲಿರುವುದು ಸರಿಯಿದೆಯಾ ಎಂದರೆ ಸಾಕ್ಷಿ ಸರಿಯಿದೆ ಎಂದು ಹೇಳುತ್ತಾರೆ. ಕೆಂಪಮ್ಮ ದಾವೆ ಹಾಕುವಾಗ ಅವರ ತಂದೆಯ ಹೆಸರನ್ನು ಯಳವೇಗೌಡ ಎಂದು ಬರೆಸಿದ್ದಾರೆ. ಕೆಂಪಮ್ಮರವರ ತಂದೆಯ ಹೆಸರು ಯಾವುದು ಸರಿ ಎಂದರೆ ಸಾಕ್ಷಿ ಜವರೇಗೌಡ ಎಂದು ಹೇಳಿರುತ್ತಾರೆ. ಅರ್ಜಿದಾರರುಗಳ ಕುಟುಂಬದ ವಂಶವೃಕ್ಷ ಕೊಟ್ಟಿರುತ್ತೀರ ಎಂದರೆ ಸಾಕ್ಷಿ ಕೊಟ್ಟಿದೆ ಎಂದು ಹೇಳುತ್ತಾರೆ. ಈ ಅರ್ಜಿ ಹಾಕಿರುವ ಕೆಂಪಮ್ಮನವರು ನಿಮ್ಮನ್ನು ಯಾವತ್ತು ದತ್ತು*

*ತೆಗೆದುಕೊಂಡಿಲ್ಲ ಎಂದರೆ ಸರಿಯಲ್ಲ. ನಿಪಿ.2 ರಿಂದ ನಿಪಿ.4 ನ್ನು ನೀವು ಈ ಪ್ರಕರಣಕ್ಕಾಗಿ ಸೃಷ್ಟಿಸಿಕೊಂಡಿರುತ್ತೀರ ಎಂದರೆ ಸರಿಯಲ್ಲ. ಕೆಂಪಮ್ಮರವರು ಯಾವತ್ತು ಮರಣ ಶಾಸನ ಬರೆದಿಲ್ಲ ಎಂದರೆ ಸರಿಯಲ್ಲ. ನೀವು, ನಿಮ್ಮ ತಂದೆ, ಮರಣ ಶಾಸನ ಪತ್ರದಲ್ಲಿರಿವ ಸಾಕ್ಷಿದಾರರು ಇವರೆಲ್ಲರೂ ಪರಸ್ಪರ ಶಾಮೀಲಾಗಿ,ಕೆಂಪಮ್ಮರವರ ಆಸ್ತಿಯನ್ನು ಹೊಡೆದುಕೊಳ್ಳಲು ದತ್ತು ಪತ್ರ ಮತ್ತು ಮರಣ ಶಾಸನ ಪತ್ರವನ್ನು ಸೃಷ್ಟಿಸಿಕೊಂಡಿರುತ್ತೀರ ಎಂದರೆ ಸರಿಯಲ್ಲ. ನಿಮ್ಮ ತಂದೆ, ತಾಯಿ ನಿಮ್ಮನ್ನು ಯಾವತ್ತು ದತ್ತು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಕೆಂಪಮ್ಮನವರ ಮೇಲೆ ಪುಟ್ಟತಾಯಮ್ಮ ಮತ್ತು ಇತರರು ದಾವೆಗೆ ಸಂಬಂಧಿಸಿದ ಅಪೀಲನ್ನು ಶ್ರೀರಂಗಪಟ್ಟಣ ನ್ಯಾಯಾಲಯದಲ್ಲಿ ಸಲ್ಲಿಸಿದ್ದಾರೆ ಎಂದರೆ ಸರಿ. ಆ ಅಪೀಲಿನಲ್ಲಿ ನಿಮ್ಮನ್ನು ವಾರಸುದಾರರನ್ನಾಗಿ ಸೇರಿಸಿದೆಯಾ ಎಂದರೆ, ಸಾಕ್ಷಿ ಸಾಕ್ಷಿ ಆ ಅಪೀಲು ನಡೆಯುತ್ತಿಲ್ಲ, ಕೈಬಿಟ್ಟಿರುತ್ತಾರೆ ಎಂದು ಹೇಳುತ್ತಾರೆ. ನೀವು ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷಿ ಕೊಡುತ್ತಿದ್ದೀರ ಎಂದರೆ ಸರಿಯಲ್ಲ. ನಿಪಿ.1 ಮತ್ತು 5 ರಲ್ಲಿರುವ ಸಹಿಗಳು ಕೆಂಪಮ್ಮರವರದ್ದಲ್ಲ ಎಂದರೆ ಸರಿಯಲ್ಲ.*

***<u>ಮರು ವಿಚಾರಣೆ ಇಲ್ಲ.</u>***

***ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗೊಳಿಸಲಾಯಿತು.***

***ಓ ಹೇ ಕೇ ಸ ಇ ಒ***

***ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು***
***ಮತ್ತು ಜೆ.ಎಂ.ಎಫ್.ಸಿ., ಪಾಂಡವಪುರ.***